# ಕನ್ನಡ ಸಾಹಿತ್ಯದ ಚೈತನ್ಯ

ಉತ್ತಮ ಪುಸ್ತಕಗಳು ನಮ್ಮ ಮನಸ್ಸನ್ನು ಪೊರೆಯುವ ರೀತಿ ಅಸಾಮಾನ್ಯವಾದದ್ದು. ಅವು ನಮ್ಮನ್ನು ಹಲವು ಬಗೆಯಲ್ಲಿ ರೂಪಿಸುತ್ತಿರುತ್ತವೆ; ನಮ್ಮ ಸಂವೇದನೆಯ ಭಾಗವಾಗಿರುತ್ತವೆ. ಮುದ್ರಿತ ಪುಸ್ತಕಗಳು ಬರುವುದಕ್ಕೂ ಮುನ್ನ ತಾಳೆಗರಿಗಳ ಕಟ್ಟುಗಳೇ ನಮಗಿದ್ದ ಪುಸ್ತಕಗಳಾಗಿದ್ದವು. ಅವೂ ಸೀಮಿತ ಸಂಖ್ಯೆಯಲ್ಲಿದ್ದವು. ಬರವಣಿಗೆ ಕಾಗದದ ಮೇಲೆ ಅಚ್ಚಾಗಲು ಶುರುವಾದ ಮೇಲೆ ಬಹುಜನರನ್ನು ಮುಟ್ಟಲು ಆರಂಭಿಸಿತು. ಕತೆ, ಕಾವ್ಯ, ಶಾಸ್ತ್ರ, ವಿಜ್ಞಾನ, ಇತಿಹಾಸ, ನಿಘಂಟು, ವ್ಯಾಕರಣದ ಪುಸ್ತಕಗಳು, ಪತ್ರಿಕೆಗಳು ಅಚ್ಚಾಗಿ ಕೈಗೆ ಸಿಗುತ್ತಿದ್ದಂತೆ ನಮ್ಮ ಬದುಕಿಗೆ, ಚಿಂತನೆಗೆ ಆಧುನಿಕತೆಯ ಸ್ಪರ್ಶವಾಯಿತು. ಹೊರ ಜಗತ್ತಿಗೆ ಹೊಸ ಬೆಳಕಿಂಡಿಗಳು, ಬಾಗಿಲುಗಳು ತೆರೆದುಕೊಳ್ಳಲು ಆರಂಭಿಸಿದವು. ಯಾವ ಅಪರೂಪದ ಜ್ಞಾನ, ಅನುಭವ ಕೆಲವೇ ಜನರಲ್ಲಿ ಉಳಿದುಕೊಂಡು ಯಜಮಾನಿಕೆ ನಡೆಸುತ್ತಿತ್ತೋ ಅದು ಒಂದೇ ಸಲಕ್ಕೆ ಎಲ್ಲರಿಗೂ ಸುಲಭವಾಗಿ ಸಿಗುವಂತಾಯಿತು. ಮುದ್ರಣ ಜನರನ್ನು ಸದ್ದಿಲ್ಲದೆ ಬೆಳೆಸಿದ ನಿಜವಾದ ಕ್ರಾಂತಿಯಾಗಿತ್ತು. ಆದ್ದರಿಂದಲೇ ಇಂದಿನ ಡಿಜಿಟಲ್ ಯುಗದಲ್ಲೂ ಕೂಡ ಪುಸ್ತಕಗಳು ಮನುಷ್ಯನ ಸನಿಹದ ನಂಬಲರ್ಹ ಸಂಗಾತಿಗಳಾಗಿವೆ; ಆಳವಾದ ತಿಳಿವಳಿಕೆಗೆ, ಆನಂದಕ್ಕೆ ದಾರಿಮಾಡಿಕೊಡುತ್ತವೆ.

ಕನ್ನಡದಲ್ಲಿ ಮುದ್ರಿತ ಪುಸ್ತಕಗಳಿಗೆ ದೊಡ್ಡ ಇತಿಹಾಸವೇನಿಲ್ಲ. ಮೊದಲ ಕನ್ನಡ ಪುಸ್ತಕಗಳನ್ನು ಅಚ್ಚುಮಾಡಿದ್ದು ಕ್ರೈಸ್ತ ಮಿಷನರಿಗಳು. ಬಳಿಕ ಅದು ಹಲವು ಸ್ತರಗಳಲ್ಲಿ ಹರಡಿಕೊಂಡು ಗಟ್ಟಿಯಾಗಿ, ವಿಸ್ತಾರವಾಗಿ ಉದ್ಯಮವಾಗಿ ಬೆಳೆದು ನಿಂತಿದೆ. ಈಗಿತ್ತಲಾಗಿ ಪುಸ್ತಕೋದ್ಯಮದಲ್ಲಿ ಆಗುತ್ತಿರುವುದನ್ನು ಆಸಕ್ತರು ಗಮನಿಸಿರಬಹುದು. ಸರ್ಕಾರದ ಪುಸ್ತಕ ಖರೀದಿಯ ಮೇಲೆ ಪ್ರಕಾಶನ ಸಂಸ್ಥೆಗಳು ಹೆಚ್ಚು ಹೆಚ್ಚು ಅವಲಂಬಿತವಾಗುತ್ತಿವೆ; ಅವು ಸರ್ಕಾರದ ಹಣ, ಬೆಂಬಲದ ಹಂಗಿಲ್ಲದೇ ಬದುಕಲು ಬೇಕಾದ ಬೆನ್ನೆಲುಬನ್ನು ಕಳೆದುಕೊಂಡು ಯಾವುದೋ ಕಾಲವಾಗಿದೆ. ಸರ್ಕಾರದ ಸಗಟು ಖರೀದಿಯನ್ನು ನಂಬಿಯೇ ಅನೇಕ ಪುಸ್ತಕಗಳು ಅಚ್ಚಾಗುತ್ತವೆ. ಅವು ನಿಜವಾದ ಓದುಗರನ್ನು ಮುಟ್ಟುವುದು ಕೆಲವೇ ಸಂಖ್ಯೆಗಳಲ್ಲಿ. ಪುಸ್ತಕೋದ್ಯಮ ಅಳಿವಿನ ಅಂಚಿಗೆ ಸರಿಯುತ್ತಿದೆ. ಅದೇ ವೇಗದಲ್ಲಿ ಓದುಗರೂ ಕಣ್ಮರೆಯಾಗುತ್ತಿದ್ದಾರೆ. ಈಗ ಆಗಬೇಕಿರುವುದು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಓದುಗರನ್ನು ಸೃಷ್ಟಿಸುವ ಕೆಲಸ. ಈ ಕೆಲಸ ಮಾತ್ರ ನಿರಾಶೆ ಹುಟ್ಟಿಸುವಂತಿದೆ.

ಇದರ ನಡುವೆಯೂ ಉರಿಬಿಸಿಲಿನ ನಡುವೆ ಸುಳಿವ ತಂಗಾಳಿಯಂತೆ 2019ರಲ್ಲಿ ಕೆಲವು ಉತ್ತಮ ಪುಸ್ತಕಗಳು ಪ್ರಕಟವಾಗಿವೆ. ಕನ್ನಡ ಸಾಹಿತ್ಯದ ಚೈತನ್ಯ ಹಲವು ಬಗೆಗಳಲ್ಲಿ ಕಾಣಿಸಿಕೊಂಡಿದೆ. 2019ರಲ್ಲಿ ಪ್ರಕಟವಾದ ಉತ್ತಮ ಪುಸ್ತಕವೊಂದರ ಬಗ್ಗೆ ನಮ್ಮ ಗುಣಗ್ರಾಹಿ ಲೇಖಕರು ಬರೆದ ಟಿಪ್ಪಣಿಗಳು 'ವರ್ಷದ ಓದು – 2019'ರಲ್ಲಿವೆ. ಇದು ಉತ್ತಮ ಪುಸ್ತಕಗಳ ಕಡೆ ಓದುಗರ ಗಮನ ಸೆಳೆಯಬಲ್ಲದು ಎಂಬುದು ನಮ್ಮ ವಿಶ್ವಾಸ. ಜೊತೆಗೆ ಈ ಬಾರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಎಚ್.ಎಸ್. ವೆಂಕಟೇಶಮೂರ್ತಿ ಹಾಗೂ ಕತೆಗಾರ ಕೇಶವರೆಡ್ಡಿ ಹಂದ್ರಾಳ ಅವರ ಸಂದರ್ಶನಗಳು ಈ ಸಂಚಿಕೆಯಲ್ಲಿವೆ.



**ಸಂದೀಪ ನಾಯಕ**